ರೀ-ಡಿಪ್ಲಾಯ್ ಮಾಡುವುದಕ್ಕೆ ತಿಳಿಸುತ್ತೇನೆ. ಏಕೆಂದರೆ ತತ್‌ಕ್ಷಣ ರೋಗಿಗಳ ಸಂಖ್ಯೆ ಜಾಸ್ತಿಯಾಗಬಹುದು. ಅಲ್ಲೆ ಸಂಪೂರ್ಣ ನಿಯಂತ್ರಣವನ್ನು ಸಾಧಿಸುವವರೆಗೆ ನಾವು ಸಿದ್ಧರಿರಬೇಕಾಗುತ್ತದೆ. ಆದುದರಿಂದ ಅಲ್ಲೆ ರೀ ಡಿಪ್ಲಾಯ್ ಮಾಡುವುದಕ್ಕೆ ನಾನು ಆದೇಶವನ್ನು ಕೂಡ ಕೊಡುತ್ತೇನೆ.

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಚಾರವನ್ನು ಕೇಳಿದೆ. ಪ್ರಾರಂಭದಲ್ಲಿ ತಾವೇ ಹೇಲಿದ ಹಾಗೆ ಪ್ರತಿ ವರ್ಷ ನಾಲ್ಕು-ನಾಲ್ಕೂವರೆ ಸಾವಿರ ಜನ ಈ ಒಂದು ಕರುಳು ಬೇನೆ ರೋಗಕ್ಕೆ ತುತ್ತಾಗಿದ್ದಾರೆ. ಈ ವರ್ಷ ತೀವ್ರವಾದಂತಹ ಬಿಸಿಲು ಪ್ರಾರಂಭವಾಗಿದೆ. ಈ ದೃಷ್ಟಿಯಿಂದ ಆರೋಗ್ಯ ಇಲಾಖೆಯವರು ಕಾಷನ್ ತೆಗೆದುಕೊಂಡು, ಇಲಾಖೆಯಿಂದ ತಾವೇ ನಾಲ್ಕು ಯುನಿಟ್‌ನಿಂದ ಬೇಕಾದಂತಹ ಸಮಯದಲ್ಲೆ ಐವಿ ಫ್ಲೂಯಿಡ್‌ಗಾಗಿ ಬರೆದಿದ್ದೀರಿ. ಆದರೆ ಆ ಕಂಪನಿಯವರು ಈಗಾಗಲೇ ಹೇಳಿದ ಹಾಗೆ ಒಂದು ತಿಂಗಳ ಹಿಂದೆ ಒಂದು ಪತ್ರವನ್ನು ಬರೆದು, ತಾವು ಕೇಳಿದ ರೇಟ್ ಕಂಟ್ರಾಕ್ಟ್ ಅಡಿಯಲ್ಲೆ ನಾವು ಸಪ್ಲೈ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ಒಂದು ಲಕ್ಷ ಬಾಟಲ್‌ಗಳನ್ನು ಕೊಡುವುದಕ್ಕೆ ನಿರಾಕರಿಸಿದ್ದಾರೆ. ಹೀಗಾಗಿ ರಾಜ್ಯದಲ್ಲೆ ಯಾವ ಆಸ್ಪತ್ರೆಯಲ್ಲೂ ಐ.ವಿ. ಫ್ಲೂಯಿಡ್ ಸಿಗುತ್ತಾ ಇಲ್ಲ. ಈ ವಿಚಾರದಲ್ಲೆ ರಾಜ್ಯ ಸರ್ಕಾರ ಏನು ಕ್ರಮ ಕೈಗೊಂಡಿದೆ. ರೇಟ್ ಕಂಟ್ರಾಕ್ಟ್ ಇದ್ದರೂ ಕೂಡ ಕೊಡದೇ ಇರುವ ಕೋರ್ ಕಂಪನಿಯವರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ? ಜೊತೆಗೆ ಈ ಒಂದು ತಿಂಗಳೊಳಗೆ ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ರಾಜ್ಯ ಸರ್ಕಾರದ ಕ್ರಮವೇನು ಎಂದು ಹೇಳಿದ್ದೇನೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ವಿವರಣೆ ನೀಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ: ಮಾನ್ಯ ಸದಸ್ಯರು ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ವಿಚಾರಣೆ ಮಾಡಿ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

(ಇ) ವಿಷಯ: ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್ ಮುಚ್ಚಿರುವುದರಿಂದ ಅಲ್ಲಿರತಕ್ಕ ಜನರಿಗೆ ತೊಂದರೆಯಾಗಿರುವುದು

+ ಶ್ರೀ ಎಂ. ಭಕ್ತವತ್ಸಲಂ (ಕೆ.ಜಿ.ಎಫ್): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲೆ ಇರತಕ್ಕಂಥ ಭಾರತ್ ಗೋಲ್ಡ್ ಮೈನ್ಸ್ ಮಾರ್ಚ್ ಒಂದನೇ ತಾರೀಖಿನಿಂದ ಮುಚ್ಚಿದೆ. ಅಲ್ಲೆ ಅದನ್ನು ಮುಚ್ಚಿದ ಮೇಲೆ ಜನರಿಗೆ ನೀರು ಕೊಡುವುದನ್ನು ಸಹ ನಿಲ್ಲಿಸಿಬಿಟ್ಟಿದ್ದಾರೆ. ಅಲ್ಲಿ ಕುಡಿಯುವ ನೀರಿಲ್ಲ. ಅದರ ಜೊತೆಗೆ ಕರೆಂಟ್ ಕಟ್ ಮಾಡಿದ್ದಾರೆ. ನೀವು ರಾಜ್ಯ ಸರ್ಕಾರದಿಂದ ಕರೆಂಟ್ ತೆಗೆದುಕೊಳ್ಳಿ ಎಂದುಕರೆಂಟ್ ಕಟ್ ಮಾಡಿದ್ದಾರೆ. ಆಸ್ಪತ್ರೆ ಫೆಸಿಲಿಟೀಸ್ ಇದ್ದು ಅದನ್ನು ಕೂಡ ಕ್ಲೋಜ್ ಮಾಡಿದ್ದಾರೆ. ಈಗ ಜನರಿಗೆ ಬಹಳ ಕಷ್ಟ ಆಗಿದೆ. ಈ ಮೈನ್ಸ್ 120 ವರ್ಷ ಹಳೆಯದಾದ ಗೋಲ್ಡ್ ಮೈನ್ಸ್ ಇದ್ದು, ನಮ್ಮ ಕರ್ನಾಟಕದಲ್ಲೆ ಪ್ರಸಿದ್ಧವಾಗಿದೆ. ಶಿವನ ಸಮುದ್ರದಿಂದ ಬರುವಂತಹ ಕರೆಂಟ್, ಇಡೀ ರಾಜ್ಯದಲ್ಲೆ ಮೊದಲು ಬಂದಿದ್ದು ನಮ್ಮ ಕೆ.ಜಿ.ಎಫ್.ಗೆ. ಈಗ ಅಲ್ಲಿನ ಜನರಿಗೆ ವಿದ್ಯುತ್ ಇಲ್ಲ, ಮತ್ತೆ ನೀರನ್ನು ಕಾರ್ಪೊರೇಷನ್‌ಗೆ ಸೇರಿದಂಥವರಿಗೆ ಕೊಟ್ಟಿದ್ದಾರೆ. ಈ ಗಣಿ ಇರುವಂತಹ ಪ್ರದೇಶದಲ್ಲಿ 75 ಸಾವಿರ ಜನರಿದ್ದಾರೆ. ಅಲ್ಲಿನ ಜನರು ಮುನಿಸಿಪಾಲಿಟಿ ಏರಿಯಾಕ್ಕೆ 3-5 ಕಿ.ಮೀ. ಗಳು ಸೈಕಲ್‌ನಲ್ಲಿ ಹೋಗಿ ನೀರನ್ನು ತೆಗೆದುಕೊಂಡು ಬರುತ್ತಿದ್ದಾರೆ. ಇಲ್ಲಿ ಶೇ. 100ಷ್ಟು ಜನರು ಎಸ್. ಸಿ. ಎಸ್. ಟಿ. ಜನಾಂಗಕ್ಕೆ ಸೇರಿದಂತಹ ಜನರಾಗಿದ್ದಾರೆ.

ಅಲ್ಲಿ ನಾಲ್ಕು ಸಾವಿರ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇವರಿಗೆ ಊಟ ಇಲ್ಲ, ಕೆಲಸವಿಲ್ಲ, ತಾವು ಈ ಗಣಿ ಕೇಂದ್ರ ಸರ್ಕಾರಕ್ಕೆ ಸೇರಿದ್ದು ಎಂದು ಹೇಳಬಹುದು. ಆದರೆ ಅಲ್ಲಿರುವಂತಹ ಎಲ್ಲಾ ಜನರು ಕರ್ನಾಟಕ ರಾಜ್ಯದ ಕಾರ್ಮಿಕರೇ ಆಗಿದ್ದಾರೆ. ನಮ್ಮ ರಾಜ್ಯ ಸರ್ಕಾರ ದಲ್ಲಿ ಅಂದು ಗಣಿ ಸಚಿವರು ಆಗಿದ್ದಂತಹ ಶ್ರೀ ಕುಮಾರ ಮಂಗಳಂ ಅವರನ್ನು ಸ್ವತಃ ಕಂಡು ಈ ವಿಚಾರವನ್ನು ಮಾತನಾಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಎಂ.ಪಿ.ಗಳನ್ನು ಕರೆದುಕೊಂಡು ಹೋಗಿ ಮಾನ್ಯ ಪ್ರಧಾನ ಮಂತ್ರಿಯವರೊಡನೆ ಮಾತನಾಡಿದ್ದಾರೆ, ಕಾಗದವನ್ನು ಬರೆದಿದ್ದಾರೆ, ಮತ್ತೆ ಈ ಸದನದಲ್ಲು ಕೂಡ ಎಲ್ಲಾ ಮಾನ್ಯ ಸದಸ್ಯರುಗಳು ಒಟ್ಟಿಗೆ ತೀರ್ಮಾನ ಮಾಡಿದೆವು. ಆದರೂ ಕೇಂದ್ರ ಸರ್ಕಾರ ದವರು ಇದರ ಬಗ್ಗೆ ಏನು ಆ್ಯಕ್ಷನ್ ತೆಗೆದುಕೊಂಡಿಲ್ಲ. ಅವರು ಮಾರ್ಚ್ 1 ನೇ ತಾರೀಖು ಮುಚ್ಚಬೇಕೆಂದು ತೀರ್ಮಾನ ಮಾಡಿದರು, ಈಗ ಹೈಕೋರ್ಟ್‌ನಿಂದ ಸದ್ಯಕ್ಕೆ ಸ್ಟೇ ಕೊಟ್ಟಿದೆ. ಇದು ಮುಂದೆ ಪರ್ಮನೆಂಟ್ ಸ್ಟೇ ಸಿಗುತ್ತದೆಯೇ ಇಲ್ಲವೇ, ಎಂಬುದನ್ನು ಕಾದು ನೋಡಬೇಕಾಗಿದೆ. ಈಗ ಸದ್ಯಕ್ಕೆ, ಕರ್ನಾಟಕ ರಾಜ್ಯದ ಕಾರ್ಮಿಕರೇ ಅಲ್ಲಿರುವಂಥಾದ್ದು ಅವರಿಗೆ ಸರ್ಕಾರ ಸಹಾಯ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ಈ ಗಣಿಯಲ್ಲಿ ಐದು ಸಾವಿರ ಕಾರ್ಮಿಕರು, ಅವರೆಲ್ಲರೂ ಎಸ್.ಸಿ. ಜನಾಂಗದವರಾಗಿದ್ದು, ಇದು ಪ್ರಾರಂಭವಾದಗಿನಿಂದ ಸತ್ತಿದ್ದಾರೆ. ಈಗ ಈ ಗಣಿ ಲಾಸ್ ಆಗಿದೆ ಎಂದು ಹೇಳುತ್ತಿದ್ದಾರೆ, ಇದು ಕಾರ್ಮಿಕರಿಂದ ಲಾಸ್ ಆಗಿಲ್ಲ, ಅಲ್ಲಿನ ಮಿಸ್ ಮ್ಯಾನೆಜ್‌ಮೆಂಟ್‌ನಿಂದ ಲಾಸ್ ಆಗಿರುವಂಥಾದ್ದು. ಈ ಗಣಿಗೆ ಕೇಂದ್ರ ಸರ್ಕರದವರು ಬಹಳ ಅನ್ಯಾಯವನ್ನು ಮಾಡಿದ್ದಾರೆ. ಅಲ್ಲಿರುವಂತಹ ಕಾರ್ಮಿಕರಿಗೆ ಕಳೆದ ಹತ್ತು ವರ್ಷಗಳಿಂದ ಸಂಬಳವನ್ನು ಕೊಟ್ಟಿಲ್ಲ. ಈಗ ಕೇಂದ್ರ ಸರ್ಕಾರದವರು ರಿ - ಕನ್ಸಿಡರ್ ಮಾಡಬೇಕೆಂದು ಕೇಳುತ್ತಿದ್ದೇನೆ, ಮತತತೆ ಇದನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. 1994 ರಲ್ಲಿ ಸುಶೀಲ ಗೋಪಾಲನ್‌ರವರು ಅಧ್ಯಕ್ಷತೆಯಲ್ಲಿ ಈ ಗಣಿಯನ್ನು ಮುಚ್ಚಬಾರದೆಂದು ಇಂಡಸ್ಟ್ರಿಯಲ್ ಪಾರ್ಲಿಮೆಂಟ್ ಸ್ಟಾ್ಯಂಡಿಂಗ್ ಕಮಿಟಿಯವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಈಗ ಬಿ.ಜೆ.ಪಿ., ಎಂ.ಪಿ.ಗಳೊಂದಿಗೆ ಅಗರ್‌ಪಾಲ್ ಅಧ್ಯಕ್ಷತೆಯಲ್ಲಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಇವರು ಹನ್ನೊಂದು ಜನ ಕೆ.ಜಿ.ಎಫ್.ಗೆ ಬಂದು ಗಣಿಯನ್ನು ವೀಕ್ಷಣೆ ಮಾಡಿ ಇದನ್ನು ಇನ್ನು 30-40 ವರ್ಷಗಳ ಕಾಲ ರನ್ ಮಾಡಬಹುದು, ಈಗ 80 ಕಿ.ಮೀ. ನಲಲಿ ಚಿನ್ನವನ್ನು ತೆಗೆದಿದ್ದಾರೆ. ಇನ್ನು 80 ಕಿ.ಮೀ. ಶ್ರೀನಿವಾಸಪುದಿಂದ ಕುಪ್ಪಂ ಕ್ಷೇತ್ರದವರೆಗೆ ಚಿನ್ನವಿದೆ. ಇಲಲಿ ಮಿಸ್ ಮ್ಯಾನೆಜ್‌ಮೆಂಟ್‌ನಿಂದು ಇದು ಲಾಸ್ ಆಗಿದೆ. ಆದುದರಿಂದ ಕೇಂದ್ರಸರ್ಕಾರದವರು ಇದನ್ನು ಮತ್ತೆ ರನ್ ಮಾಡುವುದಕ್ಕೆ ಹಣವನ್ನು ಕೊಡಬೇಕೆಂದು ಕೇಳುತ್ತೇನೆ. ಇವರು ಹಣವನ್ನು ಕೊಟ್ಟರೆ ಇನ್ನು 30-40 ವರ್ಷಗಳೂ ತನ್ನ ಕಾರ್ಯವನ್ನು ನಿರ್ವಯಿಸಬಹುದು. ಈ ವಿಚಾರದಲಲಿ ಅಗರ್‌ಪಾಲ್ ವರದಿ, ಐ.ಸಿ.ಐ.ಸಿ. ಯವರು ವರದಿಯನ್ನು ಕೊಟ್ಟಿದ್ದಾರೆ. ಇವರು 1994ರಲ್ಲಿ, 1996ರಲ್ಲಿ, ಮತ್ತೆ 1997ರಲ್ಲಿ ವರದಿಯನ್ನು ಕೊಟ್ಟಿದ್ದಾರೆ. ಇವರು 1994ರಲ್ಲಿ, 1996ರಲ್ಲಿ, ಮತ್ತೆ 1997ರಲ್ಲಿ ವರದಿಯನ್ನು ಕೊಟ್ಟಿದ್ದಾರೆ. ಈಗ ಕೇಂದ್ರ ಸರ್ಕಾರದವರು ನುರು ಕೋಟಿ ರೂಪಾಯಿಗಳನ್ನು ಈ ಗಣಿ ಇನ್ನು 35 ವರ್ಷಗಳವರೆಗೂ ನಡೆಸಬಹುದು. ಇದರಿಂದ ಅಲ್ಲಿನ ಬಡ ಜನರಿಗೂ ಅನುಕೂಲವಾಗುತ್ತದೆ. ಆದುದರಿಂದ ಕೇಂದ್ರ ಸರ್ಕಾರ ಸಹಾಯ ಮಾಡಬೇಕು ನಮ್ಮ ಈ ಗಣಿಯಿಂದ 1972 ರಿಂದ 1985 ರವೆರೆಗೆ ಲಂಡನ್ ಮಾರ್ಕೆಟ್‌ಗೆ ಚಿನ್ನವನ್ನು ಕೊಟ್ಟಿದ್ದಾರೆ. ಅದು ನಮ್ಮ ದೇಶದಲ್ಲಿ ಎಷ್ಟು ರೇಟ್ ಇದೆ. ಅದಕ್ಕೆ ಅರ್ಧ ರೇಟ್‌ನಲ್ಲಿ ಕೊಟ್ಟಿದ್ದಾರೆ. ಅದು ನಮ್ಮ ದೇಶದಲ್ಲಿ ಎಷ್ಟು ರೇಟ್ ಇದೆ. ಅದಕ್ಕೆ ಅರ್ಧ ರೇಟ್‌ನಲ್ಲಿ ಕೊಟ್ಟಿದ್ದಾರೆ. ಇದರಿಂದ 155 ಕೋಟಿ ರೂಪಾಯಿಗಳ ಲಾಸ್ ಆಗಿದೆ, ಇದು ಸರ್ಕಾರ ಮಾಡಿರುವಂತಹ ತಪ್ಪಾಗಿದೆ. ಆದುದರಿಂದ

ಸರ್ಕಾರ ನೂರು ಕೋಟಿ ರೂಪಾಯಿಗಳ ಸಹಾಯವನ್ನು ಕೊಟ್ಟು ಈ ಗಣಿಯನ್ನು ರನ್ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಅಶೋಕ್ ಮಿತ್ರರವರು ಈ ಗಣಿಯನ್ನು ರನ್ ಮಾಡಬಹುದು, ಇನ್ನು 80 ಕಿ.ಮೀ ಚಿನ್ನವಿದೆ ಎಂದು ಹೇಳಿದ್ದಾರೆ. ಇನ್ನು 35 ವರ್ಷಗಳು ಚಿನ್ನವನ್ನು ಪಡೆಯಬಹುದೆಂದು ಟೆಕ್ನಿಕಲ್ ವರದಿಯನ್ನು ನೀಡಿದ್ದಾರೆ. ಕೇಂದ್ರ ಸರ್ಕಾರದವರು ಇದನ್ನು ಮುಚ್ಚಬೇಕೆಂದು ಮುಚ್ಚಿದ್ದಾರೆ, ನಾನು ಇದನ್ನು ಖಂಡಿಸಿ ಈ ಶಾಸನಸಭೆ ನಡೆಯುವ ಕೊನೆಯ ದಿವಸದವರೆಗೂ ಧರಣಿ ಕುಳಿತುಕೊಳ್ಳುತ್ತೇನೆ. ಕೇಂದ್ರ ಸರ್ಕಾರದವರು ನಮ್ಮ ಕೆ.ಜಿ.ಎಫ್.ಗೆ ದ್ರೋಹ ಮಾಡಿದ್ದಾರೆ. ರಾಜ್ಯ ಸರ್ಕಾರದಿಂದ ಮಾನ್ಯ ಮುಖ್ಯಮಂತ್ರಿಯವರು ಕೇಂದ್ರಕ್ಕೆ ಪತ್ರವನು ಬರೆದಿದ್ದಾರೆ, ಅದನ್ನು ಕೇರ್ ಮಾಡಿಲ್ಲ. ಇಲ್ಲಿ ಇರುವಂತಹ ಎಸ್.ಸಿ. ಜನಾಂಗದವರಿಗೆ ಅನ್ಯಾಯವನ್ನು ಮಾಡಿದ್ದಾರೆ. ಈ ವಿಚಾರವಾಗಿ ಕೆ.ಜಿ. ಎಫ್.ನಲಿ ಮಾತ್ರ ಹೋರಾಟ ವಾಗಿದೆ ಎಂದಲ್ಲ, ಡಾ॥ ರಾಜ್‌ಕುಮಾರ್ ಮಂಡಳಿ, ಶಿವಮೊಗ್ಗ ಮತ್ತು ಭದ್ರಾವತಿಗಳಲ್ಲೂ ಬೆಂಗಳೂರಿನಲ್ಲಿ ಎಲ್ಲಾ ಕಡೆಗಳಲ್ಲೂ ಹೋರಾಟ ಮಾಡಿದ್ದಾರೆ.

ಹೋರಾಟವಾಗಿದೆ ಎಂದಲ್ಲ, ಡಾ॥ ರಾಜ್‌ಕುಮಾರ್ ಮಂಡಳಿ, ಶಿವಮೊಗ್ಗ ಮತ್ತು ಭದ್ರಾವತಿಗಳಲ್ಲೂ ಬೆಂಗಳೂರಿನಲ್ಲಿ ಎಲ್ಲಾ ಕಡೆಗಳಲ್ಲೂ ಹೋರಾಟ ಮಾಡಿದ್ದಾರೆ.

ಮುಖ್ಯಮಂತ್ರಿಯವರು ಕೇಂದ್ರಕ್ಕೆ ಪತ್ರವನು ಬರೆದಿದ್ದಾರೆ, ಅದನ್ನು ಕೇರ್ ಮಾಡಿಲ್ಲ. ಇಲ್ಲಿ ಇರುವಂತಹ ಎಸ್.ಸಿ. ಜನಾಂಗದವರಿಗೆ ಅನ್ಯಾಯವನ್ನು ಮಾಡಿದ್ದಾರೆ. ಈ ವಿಚಾರವಾಗಿ ಕೆ.ಜಿ. ಎಫ್.ನಲಿ ಮಾತ್ರ ಹೋರಾಟ ವಾಗಿದೆ ಎಂದಲ್ಲ, ಡಾ॥ ರಾಜ್‌ಕುಮಾರ್ ಮಂಡಳಿ, ಶಿವಮೊಗ್ಗ ಮತ್ತು ಭದ್ರಾವತಿಗಳಲ್ಲೂ ಬೆಂಗಳೂರಿನಲ್ಲಿ ಎಲ್ಲಾ ಕಡೆಗಳಲ್ಲೂ ಹೋರಾಟ ಮಾಡಿದ್ದಾರೆ. ನಮ್ಮ ರಾಜ್ಯದ ಪೊಲೀಸರು ಲಾಠಿ ಚಾರ್ಜ್ ಮಾಡಿದ್ದಾರೆ, ನಮ್ಮ ಹೆಣ್ಣು ಮಕ್ಕಳಿಗೂ ಅನ್ಯಾಯವಾಗಿದೆ. ನಮ್ಮ ಕೆ.ಜಿ.ಎಫ್.ನಲ್ಲಿ ಈ ಚಿನ್ನದ ಗಣಿ ಬಿಟ್ಟರೆ ಬೇರೆ ಏನೂ ಇಲ್ಲ, ಕೇಂದ್ರ ಸರ್ಕಾರದವರು ಏನು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ, ಅದನ್ನು ಖಂಡಿಸಿ ನಾನು ಸದನದ ಕೊನೆಯ ದಿವಸದವರೆಗೂ ಧರಣಿಗೆ ಕುಳಿತುಕೊಳ್ಳುತ್ತೇನೆ. ಅವರು ಈ ಗಣಿಯನ್ನು ಮತ್ತೆ ರಿ-ಕನ್ಸಿಡರ್ ಮಾಡಬೇಕು, ಮತ್ತೆ ರಾಜ್ಯ ಸರ್ಕಾರದವರು ಅಲ್ಲಿ ನೀರು ಮತ್ತು ಆಸ್ಪತ್ರೆಗಳ ಸೌಲಭ್ಯಗಳನ್ನು ಮಾಡಿಕೊಡಬೇಕೆಂದು ನಾನು ಆಗ್ರಹ ಪಡಿಸುತ್ತಾ ಧರಣಿಗೆ ಕುಳಿತುಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಭಕ್ತವತ್ಸಲಂರವರು ಸದನದ ಬಾವಿಗೆ ಬಂದು ಧರಣಿಗೆ ಕುಳಿತರು)

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ): ಮಾನ್ಯ ವೈಸ್ ಚೇರ್ಮನ್‌ರವರೆ, ತಮ್ಮ ಕೈಲಾದಷ್ಟು ಪ್ರಯತ್ನವನ್ನು ಈ ವಿಚಾರದಲ್ಲಿ ಮಾಡಿದ್ದಾರೆ, ಈ ವಿಚಾರ ನಮ್ಮ ಗಮನದಲ್ಲೂ ಇದೆ. ಮಾನ್ಯ ಮುಖ್ಯಮಂತ್ರಿಯವರು ಸಹ ಈ ಗಣಿಯನ್ನು ಮುಚ್ಚಬಾರದೆಂದು ಸ್ವತಃ ನಿಯೋಗವನ್ನು ತೆಗೆದುಕೊಂಡು ಹೋಗಿ ಕೇಂದ್ರದೊಡನೆ ಮಾತನಾಡಿದ್ದಾರೆ. ಆದರೆ ಅಲ್ಲಿ ಎಲ್ಲಾ ಬಡವರೇ ಇರುವುದರಿಂದ ಒಂದು ಮಾನವೀಯತೆ ದೃಷ್ಟಿಯಿಂದ ಕುಡಿಯುವ ನೀರನ್ನು ಮತ್ತು ಬೆಳಕಿಗೋಸ್ಕರ ವಿದ್ಯುಚ್ಛಕ್ತಿಯನ್ನು ಕೊಡುವಂಥಾದ್ದಕ್ಕೆ ರಾಜ್ಯ ಸರ್ಕಾರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿ ಕೇಂದ್ರ ಸರ್ಕಾರದವರು ಏನು ಬೇಕೋ ಅವರು ಮಾಡುತ್ತಿದ್ದಾರೆ. ಆದರೆ ರಾಜ್ಯ ಸರ್ಕಾರ ತಕ್ಷಣಕ್ಕೆ ವಿದ್ಯುಚ್ಛಕ್ತಿ, ನೀರು ಮತ್ತು ಆಸ್ಪತ್ರೆಯ ಸೌಲಭ್ಯಗಳನ್ನು ಕೊಡುವಂತಹ ಕೆಲಸವನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸ ಗೌಡ (ಕೋಲಾರ): ಮಾನ್ಯ ವೈಸ್ ಚೇರ್ಮನ್‌ರವರೆ, ಶ್ರೀ ಭಕ್ತವತ್ಸರಂರವರು ಹೇಳಿದಂತೆ ಇವತ್ತು ಕೆ.ಜಿ.ಎಫ್. ಡೆಡ್ ಸಿಟಿಯಾಗುತ್ತಿದೆ. ಇದಕ್ಕೆ ಕಾರಣ ಇದೆ, ಹೋದ ಸಾರಿ ಎಂಭತ್ತು ಸಾವಿರ ಓಟು ಇತ್ತು, ಈಗ ಇದು ಕಡಿಮೆಯಾಗಿದೆ. ರಾಜ್ಯದಲ್ಲಿ ದಿನೇ ದಿನೇ ಪಟ್ಟಣಗಳು ಬೆಳೆಯುತ್ತಿವೆ, ಆದರೆ ಕೆ.ಜಿ.ಎಫ್.ನಲ್ಲಿ ಜನಸಂಖ್ಯೆ ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣ ಈ ಚಿನ್ನದ ಗಣಿ ಇವತ್ತು ಮುಚ್ಚುತ್ತಿದ್ದಾರೆ. ಇವರು ಬೇತಮಂಗಲದಿಂದ ನೀರನ್ನು ತೆಗೆದುಕೊಂಡು ಬರುತ್ತಿದ್ದಾರೆ. ಇವತ್ತು ಶೇ.25ರಷ್ಟು ವಿದ್ಯುತ್ ಕಟ್ ಮಾಡಿದ್ದಾರೆ. ಕುಡಿಯುವ ನೀರಿಗೆ ಕಷ್ಟವಾಗಿದೆ. ಇವತ್ತು ಕೇಂದ್ರ ಸರ್ಕಾರದ ಮೇಲೆ ಭಾರ ಹಾಕಿ, ರಾಜ್ಯ ಸರ್ಕಾರ ನಮ್ಮದು ಏನು ಇಲ್ಲವೆಂದು ಹೇಳುತ್ತಿದ್ದಾರೆ. ಹಿಂದೆ ಈ ಗಣ ರಾಜ್ಯ ಸರ್ಕಾರಕ್ಕೆ ಸೇರಿತ್ತು, ಇದನ್ನು ನಾವು ಕೇಂದ್ರ ಸರ್ಕಾರಕ್ಕೆ ಕೊಟ್ಟು ಈಗ ಅವರನ್ನು ನೋಡುವಂತಹ ಪರಿಸ್ಥಿತಿ ನಮಗೆ ಬಂದಿದೆ. ಅಲ್ಲಿಗೆ ಕನಿಷ್ಠ ಕುಡಿಯುವ ನೀರನ್ನು ಕೊಡದ್ದಿರೆ ಅಲ್ಲಿನ ಪರಿಸ್ಥಿತಿ ಏನು? ಅಲ್ಲಿರುವಂತಹ ಜನರು ಬಡವರಾಗಿದ್ದು ಎಸ್.ಸಿ. ಜನಾಂಗದವರು ಆಗಿದ್ದಾರೆ. ಇವರು ಹೋಗುವಂತಹ ಆಸ್ಪತ್ರೆಯನ್ನು ಸಹ ಮುಚ್ಚಿದ್ದಾರೆ. ಇದರ ಬಗ್ಗೆ ರಾಜ್ಯ ಸರ್ಕಾರ ಗಮನಹರಿಸಬೇಕು, ಹೋದ ಸಾರಿ ನಾವು ಅಧಿವೇಶನದಲ್ಲಿ ರೆಸ್‌ಲ್ಯೂಷನ್ ಪಾಸ್ ಮಾಡಿದ್ದೇವೆ., ಇದು ಸ್ವಾಗತಾರ್ಹವಾದಂತಹ ವಿಚಾರವಾಗಿದೆ, ಈಗ ನಮ್ಮ ರಾಜ್ಯ ಸರ್ಕಾರ ಏನು ಮಾಡಬಹುದೆಂಬ ಬಗ್ಗೆ ಚಿಂತನೆ ಮಾಡಿಲ್ಲ. ಈಗ ಹಾಸನದಲ್ಲಿ ಇಂಡಸ್ಟ್ರಿಯಲ್ ಗ್ರೋತ್ ಸೆಂಟರ್ ಮಾಡಿದ್ದಾರೆ, ಅದು ಡೆವಲಪ್ ಆಗುತ್ತಿದೆ, ಆಗಲಿ ಬೇಡವೆಂದು ಹೇಳುವುದಿಲ್ಲ. ಆದರೆ ಕೆ.ಜಿ.ಎಫ್. ಗೂ ಇಂತಹ ಒಂದು ಇಂಡಸ್ಟ್ರಿಯಲ್ ಗ್ರೋತ್ ಸೆಂಟರ್ ಮಾಡಿದ್ದೆ ಆದರೆ, ಇಲ್ಲಿರುವ ಮುರು ಸಾವಿರ ಜನರು, ಯಾರಿದ್ದಾರೆ, ಅಲ್ಲಿ ಸುಮಾರು ಎಂಭತ್ತು ಸಾವಿರ ಜನರು ಏನು ಜೀವನ ಮಾಡುತ್ತಿದ್ದಾರೆ, ಅವರಿಗೆ ಜೀವನ ಮಾಡಲು ಸಹಾಯವಾಗುತ್ತದೆ. ಇದರ ಬಗ್ಗೆ ರಾಜ್ಯ ಸರ್ಕಾರ ಏನಾದರೂ ಚಿಂತನೆ ಮಾಡಿದೆಯಾ? ಅಥವಾ ಕೇಂದ್ರ ಸರ್ಕಾರದ ಮೇಲೆ ಹಾಕಿ ಕೈತೊಳೆದುಕೊಂಡು ಸುಮ್ಮನೆ ಇದೆಯಾ? ಈಗ ಅಲ್ಲಿ ಬಹಳ ಮುಖ್ಯವಾಗಿರುವಂಥಾದ್ದು ನೀರು ಮತ್ತು ಆಸ್ಪತ್ರೆ, ಇದನ್ನು ರಾಜ್ಯ ಸರ್ಕಾರ ಆದ್ಯತೆಯ ಮೇಲೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರು: ಮಾನ್ಯ ಚೇರ್ಮನ್‌ರವರೆ, ಮಾನ್ಯ ಶಾಸಕರುಗಳ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕು.

1.30 ಪಿ.ಎಂ.

ಶ್ರೀ ಜಗದೀಶ್ ಶೆಟ್ಟರ್: ನಾವು ಹಾಗೂ ನಮ್ಮ ಭಾರತೀಯ ಜನತಾ ಪಾರ್ಟಿಯ ಹಾಗೂ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಿಯೋಗ ಹೋಗಿತ್ತು ಅಧ್ಯಕ್ಷರೆಲ್ಲಾ ಪ್ರಯತ್ನ ಮಾಡಿದರು; ಅದನ್ನು ಉಳಿಸಿಕೊಳ್ಳಲಾಗಲಿಲ್ಲ. ಮೊನ್ನೆ ನಮ್ಮ ಪಕ್ಷದ ಅಧ್ಯಕ್ಷರು ಎಲಲಾ ಸೇರಿ ನಿಯೋಗ ಒಂದು ಹೋದಂತಹ ಸಂದರ್ಭದಲ್ಲಿ, ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ್ದೆವು, 1993 ರ ವೇತನ ಶ್ರೇಣಿಯ ಮೇಲೆ ವಿಆರ್ಎಸ್ ಪ್ರಕಾರ ಪರಿಹಾರಧನ ಕೊಡಬೇಕೆಂದು ಹೇಳಿದೆವು.

Mr. SPEAKER: What about the rehabilitation of the labourers?

ಶ್ರೀ. ಜಗದೀಶ್ ಶೆಟ್ಟರ್: ಪ್ರಸ್ತುತ ಹಾಲಿ ವೇತನ ಶ್ರೇಣಿಯ ಮೇಲೆ ಪರಿಹಾರಧನ

ಕೊಡುವಂತಹದ್ದು ನಡೆಯುತ್ತಿದೆ, ಅದಕ್ಕೆ ನಾವು ಹಿಂದಿನದನ್ನು ಕೊಡಬೇಕೆಂದು ಹೇಳಿದೆವು. ಇನ್ನು ಕುಡಿಯುವ ನೀರು ಹಾಗೂ ಆಸ್ಪತ್ರೆ ಇಂತಹ ಮೂಲಭೂತ ಸೌಕರ್ಯಗಳನ್ನು ಅವರಿಗೆ ಕಲ್ಪಿಸಿ ಕೊಡಬೇಕೆನ್ನವುದರ ಬಗ್ಗೆ ನಾನು ಕೂಡ ನನ್ನ ಕಳಕಳಿಯನ್ನು ವ್ಯಕ್ತಪಡಿಸುತ್ತೇನೆ.

ಅಧ್ಯಕ್ಷರು: ಮೊದಲು ಆಸ್ಪತ್ರೆ ಹಾಗೂ ಕುಡಿಯುವ ನೀರನ್ನು ಒದಗಿಸಿಕೊಡುವ ಬಗ್ಗೆ ಬೃಹತ್ ಕೈಗಾರಿಕಾ ಮಂತ್ರಿಗಳಾದ ದೇಶಪಾಂಡೆಯವರು ಮೊದಲು ಏರ್ಪಾಡು ಮಾಡಬೇಕು.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಕೈಗಾರಿಕಾ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಸದನಕ್ಕೆಲ್ಲಾ ಗೊತ್ತಿರುವಂತೆ ನಾವು ಬಹುಮತದಿಂದ ರೇಸಲ್ಯೂಷನ್ ಮಾಡಿ, ಯಾವುದೇ ರೀತಿಯಿಂದ ಕೈಗರಿಕೆಗೆ ತೊಂದರೆಯಾಗಬಾರದು, ಎಲ್ಲಾ ರೀತಿಯ ಇನ್ಸೆಂಟೀವ್ ಕೊಡುತ್ತೇವೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ನಿಯೋಗವನ್ನು ಕೊಂಡೊಯ್ದಿದ್ದರು, ಎಲ್ಲಾ ರೀತಿಯ ಪ್ರಯತ್ನಗಳಾಗಿವೆ, ಇವತ್ತು ನೀರು ಆಸ್ಪತ್ರೆ, ವಿದ್ಯುತ್ ವ್ಯವಸ್ಥೆ ಎಲ್ಲಾ ನಿಂತಿದೆ ಎಂಬುದನ್ನು ಮಾನ್ಯ ಸದಸ್ಯರು ಗಮನಕ್ಕೆ ತಂದಿದ್ದಾರೆ. ನನಗೆ ಈ ಕುರಿತು ಸ್ವಲ್ಪ ಸಮಯ ಕೊಟ್ಟರೆ ನಾಳೆ ಬೇಕಾದರೆ ಹೇಳಬಹುದು. ನಮ್ಮ ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಗಳು, ಮುಖ್ಯ ಕಾರ್ಯದರ್ಶಿಯವರು, ಕೇಂದ್ರ ಸರ್ಕಾರದಿಂದ ಬಂದಿರುವ ಅಧಿಕಾರಿಗಳೊಡನೆ ಇವತ್ತು ಸಭೆಯನ್ನು ಇಟ್ಟುಕೊಂಡಿದ್ದಾರೆ. ಅದರ ರಿಪೋರ್ಟ್ ಕಂ ಏನಾಗಿದೆ ಎಂಬುದನ್ನು ತಿಳಿದುಕೊಂಡು ನಾಳೆ ಈ ಬಗ್ಗೆ ಮಾತನಾಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ: ಕೆಜಿಎಫ್ ಅನ್ನು ಇಂಡ್ರಸ್ಟ್ರಿಯಲ್ ಗ್ರೋತ್ ಸೆಂಟರ್‌ನ್ನಾಗಿ ಮಾಡುವುದಕ್ಕೆ ಏನಾದರು ತೊಂದರೆ ಇದೆಯೆ?

ಶ್ರೀ ಆರ್.ವಿ.ದೇಶಪಾಂಡೆ: ಗ್ರೋತ್ ಸೆಂಟರ್ ಕಾನ್ಸ್‌ಪ್ಟ್ ಭಾರತ ಸರ್ಕಾರದ್ದು, ಹಾಗಾಗಿ ಹಾಸನ, ರಾಯಚೂರು, ಧಾರವಾಡದಲ್ಲಿ ಮಾಡಲಾಯಿತು, ಉದಾರೀಕರಣ ಕಾನ್ಸೆಪ್ಟ್ ಬಂದ ನಂತರ ಗ್ರೋತ್ ಸೆಂಟರ್ ಕಾನ್ಸೆಪ್ಟ್ ಉಳಿದಿಲ್ಲ. ಆದುದರಿಂದ ಈ ಭಾಗದಲ್ಲಿ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಬೇಕಾದ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ. ಅಲ್ಲಿ ಕೈಗಾರಿಕೆಗಳನ್ನು ಆರಂಭ ಮಾಡಲು ಅಲ್ಲಿಯ ಸ್ಥಳೀಯ ಜನ ಅಥವಾ ಹೊರಗಿನವರು ಬರುವುದಕ್ಕೆ ತಯಾರಾಗಬೇಕೇ ಹೊರತು ಸರ್ಕಾರದ ವತಿಯಿಂದ ಯಾವುದೇ ಕೈಗಾರಿಕೆಗಳನ್ನು ಆರಂಭ ಮಾಡಲು ಬೇಕಾದ ಇನ್‌ಫ್ರಾಸ್ಟ್ರಕ್ಚರ್ ನಿರ್ಮಾಣ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬಹುದು, ಆ ನಿಟ್ಟಿನಲ್ಲಿ ನಾವು ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಸದಸ್ಯರಾದ ಭಕ್ತವತ್ಸಲಂರವರು, ಮಾನ್ಯ ಮಂತ್ರಿಗಳು ನಾಳೆ ಉತ್ತರ ಕೊಡುತ್ತಾರೆಂದು ಹೇಳಿರುವುದರಿಂದ, ತಮ್ಮ ಸ್ಥಾನಕ್ಕೆ ಹೋಗುವುದು.

(ಈ ಸಂದರ್ಭದಲ್ಲಿ ಸದನದ ಬಾವಿಯಲ್ಲಿದ್ದ ಮಾನ್ಯ ಸದಸ್ಯರಾದ ಭಕ್ತವತ್ಸಲಂರವರು ತಮ್ಮ ಸ್ಥಾನಕ್ಕೆ ಮರಳಿದರು)

ಮಾನ್ಯ ಹನುಮೇಗೌಡರೆ, ಸಂಬಂಧಿಸಿದ ಮಂತ್ರಿಗಳು ತುರ್ತು ಕೆಲಸವಿದೆ ಎಂದು ನನ್ನ ಅನುಮತಿಯನ್ನು ತೆಗೆದುಕೊಂಡು ಹೋಗಿದ್ದಾರೆ ನಿಮ್ಮ ಗಮನ ಸೆಳೆಯುವ ಸೂಚನೆಯನ್ನು ನಾಳೆ ತೆಗೆದುಕೊಳ್ಳೋಣ.

(ಶೂನ್ಯ ವೇಳೆ ಮುಕ್ತಾಯವಾಯಿತು)